ಒ. ಎಸ್. ನಂ.19಼2008

**ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರ.ವ.ಬೋಧಿಸಲಾಯಿತು. ದಿಃ 07-04-2016**

**ಮುಂದುವರೆದ ಪಾಟೀ ಸವಾಲುಃ-**

ದಿಃ 17-12-2010 ರಂದು ಪೊಲೀಸ್ ಠಾಣೆಗೆ ದೂರನ್ನು ವಾದಿ ಕೊಟ್ಟಿದ್ದರು ಎಂದರೆಪಿ ನನಗೆ ಗೊತ್ತಿಲ್ಲ. ಈ ಸಂಬಂಧವಾಗಿ ನಾನು ಹೋಗಿ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿ . ಸದರಿ ದೂರಿನ ಪ್ಯಾರಾ ನಂ. 7ರಲ್ಲಿ ನ್ಯಾಯಾಲಯದಿಂದ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ನ್ಯಾಯಾಲಯುದಿಂದ ಆದೇಶವಿದ್ದರೂ ಕೂಡಾ ನಾನು ಲೈನ್ ಅನ್ನು ಎಳೆಯುತ್ತಿರುತ್ತಾರೆ ಎಂದರೆ ಸರಿಯಲ್ಲ. ದೂರಿನಲ್ಲಿ ನನ್ನ ವಕೀಲರ ಗಮನಕ್ಕೆ ತರಲಾಗಿದೆ ಎಂದು ಬರೆಯಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಾನು ಪೊಲೀಸ್ ಠಾಣೆಯಲ್ಲಿ ಕೊಟ್ಟ ಹೇಳಿಕೆಯಲ್ಲಿ ಎಲ್ಲಿಗೆ ಬೇಕಾದರೂ ಎಳೆಯುವುದಾಗಿ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಮ್ಮ ಬೀದಿಗೆ ಮಾತ್ರ ಎಳೆಯುವುದಾಗಿ ಹೇಳಿಕೆ ಕೊಟ್ಟಿರುತ್ತೇನೆ ಎಂದು ತಿಳಿಸಿರುತ್ತಾರೆ. ನಾನು ಮಂಜುನಾಥನಗರಕ್ಕೆ ಲೈನ್ ಅನ್ನು ಹಾಕಲು ಮಾತ್ರ ಅನುಮತಿ ಪಡೆದಿರುತ್ತೇನೆ. ಅಲ್ಲಿಗೆ ಮಾತ್ರ ಹಾಕಿರುತ್ತೇನೆ. ಬೇರೆ ಪ್ರತಿವಾದಿಗಳು ಈ ದಾವೆಯಲ್ಲಿ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗೆ ಶಶಿಗೆ ಮತ್ತು ಶಾಂತರಾಜು, ಮಧುವನಹಳ್ಳಿ ರಮೇಶ, ಕಂದಳ್ಳಿ ಹೊನ್ನೂರು ಕೇಬಲ್ ಅಪರೇಟರುಗಳಿಗೂ ನಾನು ಲೈನ್ ಅನ್ನು ಕೊಟ್ಟಿರುತ್ತೇನೆಂದರೆ ಸರಿಯಲ್ಲ. ಅಷ್ಟು ಸಂಪರ್ಕಗಳನ್ನು ಕೊಟ್ಟಿರುವುದರಿಂದ ನಾನು ವಾದಿಗೆ ನಷ್ಟ ಉಂಟು ಮಾಡಿರುತ್ತೇನೆಂದರೆ ಸರಿಯಲ್ಲ. ಆ ಕಾರಣದಿಂದ ನಾನು ರಾಜೀಗೆ ಒಪ್ಪಲಿಲ್ಲ ಎಂದರೆಪಿ ಸರಿಯಲ್ಲ. ನಾನು ಹೈಕೋರ್ಟ್‌ನಲ್ಲಿ 41509಼15 ರಲ್ಲಿ ವಾದಿ ನನಗೆ ಪಾರ್ಟನರ್ ಎಂದು ಕಾಣಿಸಿರುತ್ತೇನೆಂದರೆ ಸರಿ. ಸದರಿ ದಾಖಲೆಯನ್ನು ನಿಪಿ 84 ಎಂದು ಗುರುತಿಸಲಾಯಿತು. ಎಂ ಎ 3಼2011 ರಲ್ಲಿ ಪುಟಸಂಖ್ಯೆ 11 ರಲ್ಲಿ ಹಿರಿಯ ಶ್ರೇಣಿ ನ್ಯಾಯಾಲಯವು ಯಥಾಸ್ಥಿತಿ ಇರುತ್ತದೆ ಎಂದು ಹೇಳಿದೆ ಎಂದರೆ ನನಗೆಗೊತ್ತಿಲ್ಲ.

**( ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ನೀಡಿ ಮುಂದೂಡಲಾಯಿತು.)**

**ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿದೆ**
**ಓ ಹೇ ಕೇ ಸ ಇದೆ**